## 2018 ಕ.ತೀ.ವ 1597

### ಸನ್ಮಾನ್ಯ ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ

### ಮೆ॥ ಹೋಟೆಲ್ ರಾಯಲ್ ಇನ್ –ವಿರುದ್ಧ– ಕರ್ನಾಟಕ ಸರ್ಕಾರ, ಕಾರ್ಯದರ್ಶಿಯವರಿಂದ ಪ್ರತಿನಿಧಿತ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಮತ್ತು ಇತರರು*

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966.

ಕರ್ನಾಟಕ ಅಬಕಾರಿ (ಲೈಸೆನ್ಸುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967.

ಕೈಗಾರಿಕಾ ಅಭಿವೃದ್ಧಿ ಉದ್ದೇಶಗಳಿಗೆ ಸೀಮಿತವಾದ ಪ್ರದೇಶದಲ್ಲಿ ಹೋಟೆಲ್‌ಗಳನ್ನು ನಿರ್ಮಿಸಿರುವುದು ಹಾಗೂ ಬಾರ್ ಮತ್ತು ರೆಸ್ಟೋರೆಂಟ್‌ಗಳ ಲೈಸೆನ್ಸ್‌ಗಳನ್ನು ನೀಡಿರುವುದನ್ನು ಆಕ್ಷೇಪಿಸಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸಂಬಂಧಪಟ್ಟ ಅಬಕಾರಿ ಉಪ–ಆಯುಕ್ತರಿಗೆ ಬಾರ್ ಲೈಸೆನ್ಸ್‌ಗಳನ್ನು ರದ್ದುಗೊಳಿಸುವಂತೆ ಹಾಗೂ 70,106/–ರೂ.ಗಳ ವಾರ್ಷಿಕ ನಿರ್ವಹಣಾ ವೆಚ್ಚವನ್ನು ಪಾವತಿಸುವಂತೆ ಕಾನೂನುಬಾಹಿರವಾಗಿ ನಿರ್ಮಿಸಿರುವ ಹೋಟೆಲ್‌ಗಳನ್ನು ಮುಚ್ಚುವಂತೆ ಪತ್ರಗಳನ್ನು ಬರೆಯಲಾಗಿತ್ತು. ಇದರಿಂದ ಬಾಧಿತಗೊಂಡ ಅರ್ಜಿದಾರರು ಪ್ರಸ್ತುತ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಸಂಬಂಧಪಟ್ಟ ನಿಯಮಗಳು ಅಥವಾ ಅಧಿನಿಯಮಿತಿಗಳಲ್ಲಿ ಯಾವುದೇ ಶಾಸನಾತ್ಮಕ ಮಂಜೂರಾತಿಯಿಲ್ಲದಿರುವಾಗ, ಅಬಕಾರಿ ಆಯುಕ್ತರಿಗೆ ಬರೆದ ಕೆಐಎಡಿಬಿಯ ದಿನಾಂಕ 31.01.2015ರ ಪ್ರಶ್ನಿತ ಪತ್ರಕ್ಕೆ ಸಂಪೂರ್ಣವಾಗಿ ಯಾವುದೇ ಅಧಿಕಾರ ವ್ಯಾಪ್ತಿಯಿಲ್ಲದಿರುವುದು ಪ್ರಸ್ತುತ ಪ್ರಕರಣದಲ್ಲಿ ಅಬಕಾರಿ ಲೈಸೆನ್ಸ್‌ನ್ನು ನವೀಕರಿಸುವ ವಿಷಯವನ್ನು ಪರಿಗಣಿಸಲು ಅಬಕಾರಿ ಪ್ರಾಧಿಕಾರದ ವಿವೇಚನೆಯಂತೆ ಅನಗತ್ಯವಾಗಿ ಮಧ್ಯೆ ಪ್ರವೇಶಿಸಿರುವುದು ಕಂಡು ಬರುತ್ತದೆ.

---

*ರಿಟ್ ಅರ್ಜಿ ಸಂಖ್ಯೆ: 38772/2016 (ಜಿ.ಎಂ.–ಅಬಕಾರಿ) ಇದರೊಂದಿಗೆ ಇತರೆ, ದಿನಾಂಕ 22ನೇ ಆಗಸ್ಟ್, 2017.

ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು, ಕೆಐಎಡಿಬಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಬರೆದ ಅನುಬಂಧ–ಇ ನಲ್ಲಿರುವ ದಿನಾಂಕ 07.04.2015ರ ಪತ್ರವನ್ನು ಹೊರಡಿಸಲು ಕೆಐಎಡಿಬಿಗೆ ಅಧಿಕಾರ ವ್ಯಾಪ್ತಿಯಿಲ್ಲದಿರುವುದನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಯಾವುದೇ ಅಧಿಕಾರ ವ್ಯಾಪ್ತಿಯಿಲ್ಲದಿದ್ದು, ಯಾವುದೇ ಶಾಸನಬದ್ಧ ಉಪಬಂಧಗಳಿಲ್ಲದಿರುವಾಗ, ಯಾವುದೇ ಅಂಥ ಪತ್ರವನ್ನು, ಅಂಥ ಆಕ್ಷೇಪಣೆಗಳನ್ನು ಎತ್ತಲು ಕೆಐಎಡಿಬಿಗೆ ರಾಜ್ಯ ಸರ್ಕಾರವು ಬರೆಯಲಾಗುವುದಿಲ್ಲ. ಆದುದರಿಂದ ಕೆಐಎಡಿಬಿಯು ತೋರಿಸಿದ ಆಪಾದಿತ ಕಾನೂನುಬಾಹಿರತೆಗೆ ಯಾವುದೇ ಅಧಿಕಾರವ್ಯಾಪ್ತಿಯಿರುವುದಿಲ್ಲ. ಆದುದರಿಂದ, ಈ ನ್ಯಾಯಾಲಯದ ಮುಂದಿರುವ ಅರ್ಜಿದಾರರ ವಾದಕ್ಕೆ ಬಾಧಕವಾಗುವಷ್ಟರಮಟ್ಟಿಗೆ ಇರುವ ರಾಜ್ಯ ಸರ್ಕಾರ ಮತ್ತು ಕೆಐಎಡಿಬಿಯ ದಿನಾಂಕ: 07.04.2015 ಮತ್ತು 31.01.2015ರ ಎರಡೂ ಪತ್ರಗಳನ್ನು ರದ್ದುಗೊಳಿಸಲಾಗಿದೆ ಮತ್ತು ಅವುಗಳನ್ನು ತದನುಸಾರವಾಗಿ ಈ ಮೂಲಕ ರದ್ದುಗೊಳಿಸಲಾಗಿದೆ.

ಕೆಐಎಡಿಬಿ ಅಧಿನಿಯಮ, 1966ರ 2(1)ನೇ ಪ್ರಕರಣದ ಮೇರೆಗೆ “ಸೌಕರ್ಯ” ಎಂಬುದರ ಅರ್ಥವ್ಯಾಪ್ತಿಯೊಳಗೆ ‘ಹೋಟೆಲ್’ ಎಂಬುದನ್ನು ಸೇರಿಸಿದರೆ ಎದುರುದಾರ – ಕೆಐಎಡಿಬಿಗೆ ಸ್ವಲ್ಪ ಸಹಾಯವಾಗುತ್ತದೆ ಮತ್ತು ‘ಸೌಕರ್ಯ’ ಎಂಬುದರ ಪರಿಭಾಷೆಯೊಳಗೆ ‘ಹೋಟೆಲುಗಳನ್ನು ಸೇರಿಸುವುದರಿಂದ, ಕೆಐಎಡಿಬಿ ಅಧಿನಿಯಮದ ಉಪಬಂಧಗಳು ಅವರಿಗೆ ಉತ್ತಮ ವಿಸ್ತರಣೆಯಾಗುತ್ತವೆ. ಕರ್ನಾಟಕ ರಾಜ್ಯ ಅಬಕಾರಿ ಅಧಿನಿಯಮ, 1965ರ ಉಪಬಂಧಗಳ ಅಡಿಯಲ್ಲಿ ಎದುರುದಾರ ಅಬಕಾರಿ ಅಧಿಕಾರಿಗಳಿಗೆ ಪ್ರದತ್ತವಾದ ಅಧಿಕಾರಗಳೊಟ್ಟಿಗೆ ಹಸ್ತಕ್ಷೇಪವನ್ನು ಮಾಡಲು ಆಗುವುದಿಲ್ಲ. ಈ ಎರಡೂ ಅಧಿನಿಯಮಗಳನ್ನು ಸೌಹಾರ್ದಯುತವಾಗಿ ಓದಿದ ಮೇಲೆಯೂ ಕೂಡ ಅಂಥ ಹಸ್ತಕ್ಷೇಪವನ್ನು ಈ ಸಂಬಂಧದಲ್ಲಿನ ಯಾವುದೇ ಕಾನೂನಾತ್ಮಕ ಉಪಬಂಧದ ಮೂಲಕ ಸಮರ್ಥಿಸುವುದಿಲ್ಲ. ಈ ಸಂಬಂಧದಲ್ಲಿ ಯಾವುದೇ ಸ್ಪಷ್ಟ ಉಪಬಂಧಗಳಿಲ್ಲದಿರುವುದರಿಂದ ರಾಜ್ಯ ಸರ್ಕಾರ ಮತ್ತು ಕೆಐಎಡಿಬಿಯ ದಿನಾಂಕ: 07.04.2015 ಮತ್ತು 31.01.2015ರ ಪತ್ರಗಳನ್ನು ರದ್ದುಗೊಳಿಸಲು ಕಾರಣವಾಗುತ್ತವೆ ಮತ್ತು ಈ ನ್ಯಾಯಾಲಯವು ಮೇಲೆ ಅವುಗಳನ್ನು ರದ್ದುಗೊಳಿಸಿರುವುದರಿಂದ ದಿನಾಂಕ: 30.06.2016ರ ಪ್ರಶ್ನಿತ ಹಿಂಬರಹ ಅನುಬಂಧ–ಎಫ್‌ಅನ್ನು ಉಳಿಸಿಕೊಳ್ಳಲು

**ಯಾವುದೇ ಕಾನೂನು ಆಧಾರಗಳು ಉಳಿದಿರುವುದಿಲ್ಲ. ಆದುದರಿಂದ ಅದನ್ನು ಸಹ ರದ್ದುಗೊಳಿಸಿದ್ದು, ತದನುಸಾರವಾಗಿ ಇದನ್ನು ರದ್ದುಗೊಳಿಸಲಾಗಿದೆ.**

**ಆದುದರಿಂದ ಈ ರಿಟ್ ಅರ್ಜಿಗಳನ್ನು ಪುರಸ್ಕರಿಸಲು ಅರ್ಹವಾಗಿವೆ. ರಾಜ್ಯ ಅಬಕಾರಿ ಅಧಿನಿಯಮ, 1967ರ ಮೂಲಕ ರೂಪಿಸಲಾದ ಅಬಕಾರಿ ಪ್ರಾಧಿಕಾರಗಳ ಅಧಿಕಾರವನ್ನು ಚಲಾಯಿಸಿ, ಪ್ರತಿಯಾಗಿ ವಿಷಯದಲ್ಲಿನ ಅವರ ಅನಗತ್ಯ ಮತ್ತು ಕಾನೂನುಬಾಹಿರವಾಗಿ ಹಸ್ತಕ್ಷೇಪ ಮಾಡಿದ್ದು, ಇಲ್ಲಿಯವರೆಗೆ ಅಬಕಾರಿ ಲೈಸೆನ್ಸುಗಳನ್ನು ಕೋರುವ ಅವರ ಹಕ್ಕುಗಳನ್ನು ಕಿತ್ತುಕೊಂಡಿರುವ ಕಾರಣದಿಂದ ಈ ನ್ಯಾಯಾಲಯದ ಮುಂದಿರುವ ಪ್ರತಿಯೊಬ್ಬರಿಗೆ ಎದುರುದಾರ ಕೆಐಎಡಿಬಿಯು 5,000/– ರೂ.ಗಳ ವೆಚ್ಚವನ್ನು ಸಂದಾಯ ಮಾಡುವುದರ ಜೊತೆಗೆ ಇದನ್ನು ಪುರಸ್ಕರಿಸಲಾಗಿದೆ.**

ಶ್ರೀ ಆರ್.ಎಸ್. ರವಿ, ವಕೀಲರು ಇವರ ಪರವಾಗಿ ಶ್ರೀ ನರೇಂದ್ರ ಡಿ.ವಿ. ಗೌಡ, ವಕೀಲರು;
ಪ್ರತ್ಯರ್ಜಿದಾರರ 1, 4 ಮತ್ತು 5 ಪರ: ಶ್ರೀ ಎ.ಎಂ.ಸುರೇಶ್ ರೆಡ್ಡಿ, ಎಜಿಎ,
ಪ್ರತ್ಯರ್ಜಿದಾರ 2 ಮತ್ತು 3ರ ಪರ: ಶ್ರೀ ಐ. ಗೋಪಾಲ ಕೃಷ್ಣ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ:**

1. ಸಾಮಾನ್ಯ ಪ್ರಶ್ನೆಯನ್ನು ಎತ್ತಿರುವ ಈ ಪ್ರಕರಣಗಳ ತಂಡವನ್ನು ಸಾಮಾನ್ಯ ಆದೇಶದ ಮೂಲಕ ವಿಲೆ ಮಾಡಲಾಗಿದೆ.

2. ಸಚಿತ್ರವಾಗಿ ವಿವರಿಸಲಾದ ಸಂಗತಿಗಳನ್ನು, **ರಿಟ್ ಅರ್ಜಿ ಸಂಖ್ಯೆ:38772/ 2016, ಮೆಸರ್ಸ್ ಹೋಟೆಲ್ ರಾಯಲ್ ಇನ್ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು** ಪ್ರಕರಣದಿಂದ ಎತ್ತಿಕೊಳ್ಳಲಾಗಿದೆ.

3. ಎದುರುದಾರ–ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಸಂಕ್ಷಿಪ್ತತೆಗಾಗಿ ಕೆಐಎಡಿಬಿ) ದಿನಾಂಕ 31.01.2015ರ ತನ್ನ ಪತ್ರದ ಮೂಲಕ, ಬೆಂಗಳೂರಿನ ಅಬಕಾರಿ ಆಯುಕ್ತರಿಗೆ, ಕೆಐಎಡಿಬಿಯು ಹಂಚಿಕೆ ಮಾಡಿದ ಕೈಗಾರಿಕಾ ನಿವೇಶನಗಳಲ್ಲಿ ನಿರ್ಮಿಸಿ, ಅಭಿವೃದ್ಧಿಪಡಿಸಿದ ಹೋಟೆಲುಗಳಲ್ಲಿ ಬಾರುಗಳು ಮತ್ತು ರೆಸ್ಟೋರೆಂಟುಗಳಿಗೆ ಅಬಕಾರಿ ಲೈಸೆನ್ಸನ್ನು ನೀಡಿರುವುದಕ್ಕೆ ಮತ್ತು ಅವುಗಳಿಗೆ ನೀಡಿರುವ ಅಂಥ ಮಾಹಿತಿಯನ್ನು ಆಕ್ಷೇಪಿಸಿ, ಮೈಸೂರಿನ ಅಬಕಾರಿ ಉಪ–ಆಯುಕ್ತರಿಗೆ ದಿನಾಂಕ: 30.06.2016ರಂದು ಅನುಬಂಧ–ಎಫ್ ಪ್ರಶ್ನಿತ ಹಿಂಬರಹವನ್ನು ನೀಡಿದ್ದು, 2016–17ನೇ ಸಾಲಿಗೆ ಅರ್ಜಿದಾರನಿಗೆ ಅಬಕಾರಿ ಲೈಸೆನ್ಸನ್ನು ನವೀಕರಿಸುವುದನ್ನು ತಿರಸ್ಕರಿಸಿರುವ ಬಗ್ಗೆ ಆದ ತೊಂದರೆಯನ್ನು ಪ್ರಸ್ತುತ ರಿಟ್ ಅರ್ಜಿಯಲ್ಲಿ ತಿಳಿಸಲಾಗಿದೆ. ಜಿಲ್ಲಾಧಿಕಾರಿಯವರ ಸದರಿ ನಿರಾಕರಣೆಯನ್ನು ಪ್ರಸ್ತುತ ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.

4. ಈ ಪ್ರಕರಣದ ಅರ್ಜಿದಾರನು, ಅಂಥ ವಾರ್ಷಿಕ ನಿರ್ವಹಣಾ ವೆಚ್ಚವನ್ನು ವಿಧಿಸುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ಶಾಸನಬದ್ಧ ಉಪಬಂಧಗಳ ಸೂಚನೆಯನ್ನು ಪತ್ರದಲ್ಲಿ ಉಲ್ಲೇಖಿಸದಿದ್ದರೂ ಕೂಡ, 2015–16ನೇ ಸಾಲಿಗೆ ಎದುರುದಾರ–ಕೆಐಎಡಿಬಿಯು ಕೋರಿದ 70,106/– ರೂ.ಗಳ ವಾರ್ಷಿಕ ನಿರ್ವಹಣಾ ವೆಚ್ಚವನ್ನು ವಿಧಿಸಿರುವ ದಿನಾಂಕ 18.05.2016ರ ಕೆಐಎಡಿಬಿ ಆದೇಶ ಅನುಬಂಧ–ಎಚ್ ಅನ್ನೂ ಕೂಡ ಪ್ರಶ್ನಿಸಲಾಗಿದ್ದು, ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ.435–ಪಿ ಯಲ್ಲಿ ಹೋಟೆಲನ್ನು ಕಾನೂನುಬಾಹಿರವಾಗಿ ನಿರ್ಮಿಸಿರುವುದರಿಂದ, ಅರ್ಜಿದಾರನು ಸದರಿ ಹೋಟೆಲನ್ನು ಮುಚ್ಚಲು ಸೂಚನೆ ನೀಡಿರುವುದಷ್ಟೇ ಅಲ್ಲದೆ, ವಾರ್ಷಿಕ ನಿರ್ವಹಣಾ ವೆಚ್ಚಗಳನ್ನು ಸಂದಾಯ ಮಾಡಲೂ ಕೂಡ ಸೂಚಿಸಲಾಗಿದೆಯೆಂಬುದನ್ನೂ ಇದರಲ್ಲಿ ತಿಳಿಸಲಾಗಿದೆ.

5. ಇದರಿಂದ ಬಾಧಿತವಾದ ಅರ್ಜಿದಾರರು, ಮನವಿಯನ್ನು ಸಲ್ಲಿಸುವ ಮೂಲಕ ಈ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ.

6. ನೋಟೀಸನ್ನು ಹೊರಡಿಸಿದ ನಂತರ, ಮಾನ್ಯ ವಕೀಲರಾದ ಶ್ರೀ ಗೋಪಾಲಕೃಷ್ಣರವರು, ಎದುರುದಾರ–ಕೆಐಎಡಿಬಿಯ ಪರವಾಗಿ ಹಾಜರಾಗಿದ್ದಾರೆ.

7. ಕೆಐಎಡಿಬಿಯ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಕೆಐಎಡಿಬಿ ಅಧಿನಿಯಮ, 1966ರ 2(1)ನೇ ಪ್ರಕರಣದಲ್ಲಿ ನೀಡಲಾದಂತೆ 'ಸೌಕರ್ಯ'ಗಳ ಪರಿಭಾಷೆಯ ಪ್ರಕಾರ, 'ಹೋಟೆಲ್'ನ್ನು 'ಸೌಕರ್ಯ'ದ ಪರಿಭಾಷೆಯಲ್ಲಿ ಸೇರಿಸಲಾಗಿದೆಯೆಂದು ಈ ನ್ಯಾಯಾಲಯದ ಮುಂದೆ ವಾದಿಸಿದ್ದಾರೆ. ಮಾನ್ಯ ವಕೀಲರು, ದಿನಾಂಕ: 09.05.1991ರ ಅಧಿಸೂಚನೆ ಪ್ರಕಾರ, ಸದರಿ ಪರಿಭಾಷೆಯಲ್ಲಿ 'ಆಸ್ಪತ್ರೆಗಳು, ಔಷಧಾಲಯಗಳು, ಹೋಟೆಲುಗಳು, ಮೋಟೆಲುಗಳು, ಆರೋಗ್ಯ ಮತ್ತು ರಜಾದಿನ ರೆಸಾರ್ಟ್‌ಗಳು ಮತ್ತು ಸಿನಿಮಾ ಮಂದಿರ'ಗಳು ಒಳಗೊಳ್ಳುತ್ತವೆ. ಅದನ್ನು ಸಿದ್ಧ ಪರಾಮರ್ಶೆಗಾಗಿ ಕೆಳಗೆ ಉದ್ಧರಿಸಲಾಗಿದೆ:

**"ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966**

**ಅಧಿಸೂಚನೆ**

**ಸಂಖ್ಯೆ: ಸಿಐ 86 ಎಸ್‌ಪಿಕ್ಯೂ 90, ಬೆಂಗಳೂರು,**

**ದಿನಾಂಕ: 13ನೇ ಮಾರ್ಚ್ 1991,**

**ಕರ್ನಾಟಕ ರಾಜ್ಯಪತ್ರ, ದಿನಾಂಕ: 09.05.1991.**

ಕರ್ನಾಟಕ ಪ್ರದೇಶಾಭಿವೃದ್ಧಿ ಅಧಿನಿಯಮ, 1966ರ (1966ರ ಕರ್ನಾಟಕ ಅಧಿನಿಯಮ, 18) 2ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮದ ಉದ್ದೇಶಕ್ಕಾಗಿ ಸೌಕರ್ಯಗಳಿಗಾಗಿ ಈ ಮುಂದಿನವುಗಳನ್ನು ನಿರ್ದಿಷ್ಟಪಡಿಸಲಾಗಿದೆ. ಇವು, ರಾಜ್ಯಪತ್ರದಲ್ಲಿ ಇವುಗಳ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಜೆರಾಕ್ಸ್ ಸೌಲಭ್ಯಗಳನ್ನೂ ಒಳಗೊಂಡಂತೆ ಬ್ಯಾಂಕುಗಳು, ಅಂಚೆ ಕಚೇರಿಗಳು, ದೂರವಾಣಿ ಮತ್ತು ಟೆಲೆಕ್ಸ್ ವಿನಿಮಯ ಕೇಂದ್ರಗಳು, ಕ್ಯಾಂಟೀನುಗಳು, ಅಗ್ನಿಶಾಮಕ ದಳ ಮತ್ತು ಇತರ ಸೇವೆಗಳು.

xxxxxx

xxxxxxxxxxx

ಆಸ್ಪತ್ರೆಗಳು, ಔಷಧಾಲಯುಗಳು, ಹೋಟೆಲುಗಳು, ಮೋಟೆಲುಗಳು ಮತ್ತು ಆರೋಗ್ಯ ಹಾಗೂ ರಜಾ ದಿನದ ರೆಸಾರ್ಟ್‌ಗಳು, ಸಿನಿಮಾ ಮಂದಿರಗಳು".

8. ಕೆಐಎಡಿಬಿಯು, ಅಬಕಾರಿ ಇಲಾಖೆಯ ಆಯುಕ್ತರಿಗೆ ಬರೆಯಲಾದ ದಿನಾಂಕ 31.01.2015ರ ಪ್ರಶ್ನಿತ ಪತ್ರದ ಸಂಬಂಧಪಟ್ಟ ಉದ್ಧೃತ ಭಾಗವನ್ನು ಸಹ ಸಿದ್ಧ ಉಲ್ಲೇಖಕ್ಕಾಗಿ ಈ ಕೆಳಗೆ ಉದ್ಧರಿಸಲಾಗಿದೆ.

*"ಸಂಖ್ಯೆ: ಕ.ಕೈ.ಪ್ರ/ಮಂ.ಕೇಂ.ಕಾ/ಹಂಚಿಕೆ/14398/2014–15*

*ದಿನಾಂಕ: 31.01.2015.*
*ಆಯುಕ್ತರು,*
*ಅಬಕಾರಿ ಇಲಾಖೆ,*
*ಬಿ.ಎಂ.ಟಿ.ಸಿ. ಬಸ್ ನಿಲ್ದಾಣ,*
*ಶಾಂತಿನಗರ, ಬೆಂಗಳೂರು.*

*ಮಾನ್ಯರೆ,*

*ವಿಷಯ: ವಿಧಾನಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ರಾಮಚಂದ್ರಗೌಡರು (ಪದವೀಧರ ಕ್ಷೇತ್ರ) ಎತ್ತಿದ ಚುಕ್ಕೆ ಗುರುತಿನ*

*ಪ್ರಶ್ನೆಯನ್ನು ಹೊಂದಿರುವ ಸಂಖ್ಯೆ: 128 (583)ರಲ್ಲಿ ಚುಕ್ಕೆ ಗುರುತಿನ ಪ್ರಶ್ನೆಗೆ ಪ್ರತಿಕ್ರಿಯೆಯನ್ನು ದಿನಾಂಕ 3.7.2014ರಂದು ನೀಡುವಾಗ ಮಾನ್ಯ ಮುಖ್ಯ ಮಂತ್ರಿಯವರು ನೀಡಿದ ಭರವಸೆಗೆ ಸಂಬಂಧಿಸಿದ ವರದಿಯನ್ನು ಸಲ್ಲಿಸುವ ಬಗ್ಗೆ ಮತ್ತು ಕೈಗಾರಿಕಾ ಪ್ರದೇಶದಲ್ಲಿ ನಡೆಸುತ್ತಿರುವ ಬಾರ್‌ಗೆ ಸಂಬಂಧಪಟ್ಟಂತೆ ಅಬಕಾರಿ ಇಲಾಖೆಯಿಂದ ಪಡೆದುಕೊಂಡ ಲೈಸೆನ್ಸ್‌ನ್ನು ರದ್ದುಪಡಿಸುವ ಬಗ್ಗೆ.*

*ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಗೌಡರು (ಪದವೀಧರ ಕ್ಷೇತ್ರ) ಎತ್ತಿನ ಸಂಖ್ಯೆ.128 (583)ನ್ನು ಹೊಂದಿರುವ ಚುಕ್ಕೆ ಗುರುತಿನ ಪ್ರಶ್ನೆಗೆ, ವಿಧಾನ ಪರಿಷತ್ತಿನಲ್ಲಿ ತಮ್ಮ ಪ್ರತಿಕ್ರಿಯೆಯನ್ನು ನೀಡುವಾಗ ಮಾನ್ಯ ಮುಖ್ಯ ಮಂತ್ರಿಯವರು, ವಿವಿಧ ಜಿಲ್ಲೆಗಳ ಕರ್ನಾಟಕ ಕೈಗಾರಿಕಾಭಿವೃದ್ಧಿ ಪ್ರದೇಶವು ಹಂಚಿಕೆ ಮಾಡಿರುವ, ಕೈಗಾರಿಕೆಗಾಗಿ ಉದ್ದೇಶಿಸಲಾದ ಭೂಮಿಗೆ ಅಬಕಾರಿ ಇಲಾಖೆಯಿಂದ ಲೈಸೆನ್ಸನ್ನು ಪಡೆದುಕೊಂಡ ನಂತರ ಮದ್ಯದಂಗಡಿಗಳನ್ನು ನಡೆಸುವ ಸಂಬಂಧಪಟ್ಟ ಘಟಕದ ವಿರುದ್ಧ ಕ್ರಮವನ್ನು ಪರಿಶೀಲಿಸುವ ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದ್ದರು.*

*ಮೇಲಿನದಷ್ಟೇ ಅಲ್ಲದೆ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು, ವಿಧಾನ ಪರಿಷತ್ತಿನಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ನೀಡಿದ ಭರವಸೆಯ ಪ್ರಕಾರ ಈ ಸಂಬಂಧದಲ್ಲಿ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಈ ಕೂಡಲೇ ಕ್ರಮಗಳನ್ನು ಕೈಗೊಳ್ಳುವ ಮೂಲಕ ದಿನಾಂಕ: 24.11.2014ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು ಎಂದು ಸರ್ಕಾರದ ಪತ್ರದಲ್ಲಿ ಈ ಮೂಲಕ ಸೂಚಿಸಲಾಗಿದೆ.*

ಮಂಡಳಿಯು ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶದಲ್ಲಿ ಕಾನೂನಿನ ಉಲ್ಲಂಘನೆಯನ್ನು ಮಾಡಿ ಲೈಸೆನ್ಸನ್ನು ಪಡೆದುಕೊಳ್ಳುವ ಮೂಲಕ ಕೈಗಾರಿಕಾ ಪ್ರದೇಶದಲ್ಲಿ ಈ ಮುಂದಿನ ವಾಣಿಜ್ಯೋದ್ಯಮಿಗಳು ಬಾರುಗಳನ್ನು ನಡೆಸುತ್ತಿರುವುದು ಕಂಡು ಬಂದಿರುತ್ತದೆ.

xxxxxxxxxxxxxxxxxxxxx
xxxxxxxxxxxxxxxxxxxxxx

10. ಮೈಸೂರು ಜಿಲ್ಲೆ

(ಎ) ಹೆಬ್ಬಾಳ ಕೈಗಾರಿಕಾ ಪ್ರದೇಶ

| ಕ್ರಮ ಸಂಖ್ಯೆ | ವಾಣಿಜ್ಯೋದ್ಯಮಿಗಳ ಹೆಸರು | ಕೈಗಾರಿಕಾ ಜಮೀನಿನ ಸಂಖ್ಯೆ |
|---|---|---|
| 1. | ಮೆಸರ್ಸ್ ಶ್ರೀ ಹೋಟೆಲ್ ಅನ್ನಪೂರ್ಣೇಶ್ವರಿ ಮಾಲೀಕರು, ಶ್ರೀ ಎಂ.ಎಸ್. ರೇವಣ್ಣ. | 438–ಎಫ್–ಭಾಗ |
| 2. | ಶ್ರೀ ಸಿ. ಬಸವೇಗೌಡ | 435 – ಪಿ |
| 3. | ಮೆಸರ್ಸ್ ಚೇತನ್ ಗ್ಯಾಸ್ ಪಾಯಿಂಟ್ ಬಾಟ್ಲಿಂಗ್ ಪ್ರೈ. ಲಿಮಿಟೆಡ್ | 345 – ಎ |

(ಸಿ) ಹೂಟಗಳ್ಳಿ ಕೈಗಾರಿಕಾ ಪ್ರದೇಶ

(ಡಿ)

| ಕ್ರಮ ಸಂಖ್ಯೆ | ವಾಣಿಜ್ಯೋದ್ಯಮಿಗಳ ಹೆಸರು | ಕೈಗಾರಿಕಾ ಜಮೀನಿನ ಸಂಖ್ಯೆ |
|---|---|---|
| *1.* | *ಮೆಸರ್ಸ್ ಹೋಟೆಲ್ ಕೀನಿಸ್ ಪ್ರೈ. ಲಿಮಿಟೆಡ್* | *85 ಮತ್ತು 87* |

*xxxxxxxxxxx*

*ಕೈಗಾರಿಕಾ ಪ್ರದೇಶದಲ್ಲಿ ಬಾರನ್ನು ಅಥವಾ ಕೈಗಾರಿಕಾ ಚಟುವಟಿಕೆಗಳಿಲ್ಲದ ಕೃತ್ಯಗಳನ್ನು ನಡೆಸಲು ವ್ಯವಸ್ಥೆಯು ಇಲ್ಲದಿರುವುದರ ಹಿನ್ನೆಲೆಯಲ್ಲಿ ಬಾರ್‌ಗೆ ನೀಡಲಾದ ಲೈಸೆನ್ಸನ್ನು ರದ್ದುಪಡಿಸಲು ಈ ಮೂಲಕ ಗೌರವಯುತವಾಗಿ ಕೋರಲಾಗಿದೆ.*

*ತಮ್ಮ ವಿಶ್ವಾಸಿ,*

*ಸಹಿ/–*
*ಮುಖ್ಯ ಕಾರ್ಯ ನಿರ್ವಾಹಕ*
*ಅಧಿಕಾರಿ ಮತ್ತು*
*ಕಾರ್ಯ ನಿರ್ವಾಹಕ ಸದಸ್ಯ".*

9. ಎದುರುದಾರ – ಅಬಕಾರಿ ಇಲಾಖೆಯು, ಪ್ರಸ್ತುತ ತಂಡದಲ್ಲಿನ **ರಿಟ್ ಅರ್ಜಿ ಸಂಖ್ಯೆ:30503/2016ರಲ್ಲಿ** ಸಲ್ಲಿಸಲಾದ ತನ್ನ ಆಕ್ಷೇಪಣೆಗಳ ಹೇಳಿಕೆಯಲ್ಲಿ ಕೆಐಎಡಿಬಿಯು ಕೈಗೊಂಡ ನಿಲುವನ್ನು ಆಧರಿಸಿದೆ ಮತ್ತು ಹೀಗಾಗಿ, ಮೇಲೆ ಉದ್ಧರಿಸಲಾದ ದಿನಾಂಕ: **31.01.2015ರ** ಅವರ ಪತ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಬಕಾರಿ ಲೈಸೆನ್ಸನ್ನು ನವೀಕರಿಸುವುದನ್ನು ನಿರಾಕರಿಸುವ ತಮ್ಮ ಕ್ರಮವನ್ನು ಅವರು ಸಮರ್ಥಿಸಿಕೊಂಡಿದ್ದಾರೆ.

10. ಮತ್ತೊಂದು ಕಡೆ, ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಸಂಬಂಧಪಟ್ಟ ಅಬಕಾರಿ ನಿಯಮಗಳಲ್ಲಿ ಎಂದರೆ **ಕರ್ನಾಟಕ ಅಬಕಾರಿ (ಲೈಸೆನ್ಸುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967**ರಲ್ಲಿ ಅಂಥ ಅಗತ್ಯತೆಯಿಲ್ಲವೆಂದು ಇದರ ಪೈಕಿ 5ನೇ ನಿಯಮ ಮಾತ್ರ ಸದ್ಯದ ಉದ್ದೇಶಗಳಿಗೆ ಸಂಬಂಧಪಡುತ್ತಿದ್ದು, ಇದು, ಮದ್ಯದಂಗಡಿಗಳನ್ನು ನಿಯಂತ್ರಿಸುವಲ್ಲಿನ ನಿರ್ಬಂಧಗಳನ್ನು ನಿಯಮಿಸುತ್ತಿದ್ದು ಇದನ್ನು ಸಿದ್ಧ ಉಲ್ಲೇಖಕ್ಕಾಗಿ ಈ ಕೆಳಗೆ ಉದ್ಧರಿಸಲಾಗಿದೆ.

*"5ನೇ ನಿಯಮ. ಅಂಗಡಿಗಳಿರುವ ಸ್ಥಳದ ಸಂಬಂಧದಲ್ಲಿ ನಿರ್ಬಂಧ:*

*(1) ಯಾವುದೇ ಧಾರ್ಮಿಕ ಅಥವಾ ಶೈಕ್ಷಣಿಕ ಸಂಸ್ಥೆಗಳಿಂದ ಅಥವಾ ಆಸ್ಪತ್ರೆಗಳಿಂದ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಯಾವುದೇ ಕಚೇರಿಗಳಿಂದ 100 ಮೀಟರ್ ಅಂತರದೊಳಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ನಿವಾಸಿಗಳು ಪ್ರಧಾನವಾಗಿ ಇರುವ ವಸತಿ ಸ್ಥಳಗಳಲ್ಲಿ ಅಥವಾ ರಾಜ್ಯ ಹೆದ್ದಾರಿಗಳು ಅಥವಾ ರಾಷ್ಟ್ರೀಯ ಹೆದ್ದಾರಿಗಳ ಮಧ್ಯಮಾರ್ಗದಿಂದ 220 ಮೀಟರುಗಳ ಅಂತರದೊಳಗೆ ಆಯ್ಕೆಯಾಗಿರುವ ಮದ್ಯದಂಗಡಿ ಅಥವಾ ಆವರಣಗಳಿಗೆ ಮದ್ಯ ಮಾರಾಟ ಮಾಡಲು ಲೈಸೆನ್ಸ್‌ನ್ನು ನೀಡತಕ್ಕದ್ದಲ್ಲ.*

*[ಪರಂತು, ಎರಡು ಸಾವಿರದ ಐದುನೂರಕ್ಕಿಂತ ಕಡಿಮೆಯಿರುವ ಜನಸಂಖ್ಯೆಯ ಗ್ರಾಮಕ್ಕೆ ಅಂಗಡಿಯು ಮಂಜೂರಾಗಿದ್ದಲ್ಲಿ ಅಂಥ ಅಂಗಡಿಯು, ಗ್ರಾಮದ ವಸತಿ ಪ್ರದೇಶದಿಂದ ಹೊರಗೆ ಇರತಕ್ಕದ್ದು.] [ವಿವರಣೆ:– (1) [ಈ ನಿಯಮದ ಉದ್ದೇಶಕ್ಕಾಗಿ, 'ರಾಷ್ಟ್ರೀಯ ಹೆದ್ದಾರಿ' ಅಥವಾ 'ರಾಜ್ಯ ಹೆದ್ದಾರಿ' ಗಳನ್ನು ನಗರಸಭೆ, ನಗರ*

*ಅಥವಾ ಪಟ್ಟಣ ಪುರಸಭೆಯ ವ್ಯಾಪ್ತಿಯೊಳಗೆ ಇರುವಂಥ ರಾಷ್ಟ್ರೀಯ ಹೆದ್ದಾರಿ ಅಥವಾ ರಾಜ್ಯ ಹೆದ್ದಾರಿಗಳಂಥ ಭಾಗಗಳಲ್ಲಿ ಅಥವಾ ಇಪ್ಪತ್ತು ಸಾವಿರ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವಂಥ ಇತರ ಪ್ರಾಧಿಕಾರಗಳಲ್ಲಿ ಅಂಥ ಭಾಗಗಳನ್ನು ಸೇರಿಸತಕ್ಕದ್ದಲ್ಲ.]*

*[ವಿವರಣೆ:– (2) [ಈ ನಿಯಮದ ಉದ್ದೇಶಕ್ಕಾಗಿ, ಪದಾವಳಿ "ಆಸ್ಪತ್ರೆ" ಎಂದರೆ ಯಾವುದೇ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಪ್ರಾಥಮಿಕ ಆರೋಗ್ಯ ಘಟಕ ಮತ್ತು ಇದು ಖಾಸಗಿ ಆಸ್ಪತ್ರೆಯನ್ನು ಅಥವಾ ಒಳರೋಗಿಗಳ ಚಿಕಿತ್ಸೆಗೆ ಕನಿಷ್ಠ ಮೂವತ್ತು ಹಾಸಿಗೆಯ ಸೌಲಭ್ಯವಿರುವ ಖಾಸಗಿ ನರ್ಸಿಂಗ್ ಹೋಮ್ ಅನ್ನು ಒಳಗೊಳ್ಳುತ್ತದೆ.]*

*[ವಿವರಣೆ:– (3) [ ಈ ನಿಯಮದ ಉದ್ದೇಶಕ್ಕಾಗಿ, "ರಾಜ್ಯ ಸಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ" ಪದಾವಳಿ ಎಂಬುದು, 'ಎ' ಅಥವಾ 'ಬಿ' ದರ್ಜೆ ಸಮೂಹದ ಮುಖ್ಯಸ್ಥರಿರುವ ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದ ಕಚೇರಿ ಎಂದು ಅರ್ಥ ಮತ್ತು ನಗರ ಪಾಲಿಕೆ, ನಗರ ಸಭೆ, ಪಟ್ಟಣ ಪುರಸಭೆ, ಪಟ್ಟಣ ಪಂಚಾಯತಿ, ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಯಂಥ ಸ್ಥಳೀಯ ನಿಕಾಯಗಳ ಮುಖ್ಯ ಆಡಳಿತಾತ್ಮಕ ಕಚೇರಿಗಳನ್ನು ಮತ್ತು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಅಥವಾ ಕಾಲಕಾಲಕ್ಕೆ ಸರ್ಕಾರವು ನಿರ್ದಿಷ್ಟಪಡಿಸ ಬಹುದಾದಂಥ ಸ್ಥಳೀಯ ಪ್ರಾಧಿಕಾರಗಳನ್ನು ಒಳಗೊಳ್ಳುತ್ತದೆ.]*

*(2) ಅಬಕಾರಿ ಉಪ–ಆಯುಕ್ತರು, ಹಾಗೆ ಆಯ್ಕೆಯಾದ ಮದ್ಯದಂಗಡಿಗಳ ಆವರಣವನ್ನು ಅನುಮೋದಿಸಲು ತಾನು*

*ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ನಂತರ ಮತ್ತು ಮದ್ಯದಂಗಡಿಯ ಆವರಣದ ವಿವರಣೆಯನ್ನು ಪಡೆದುಕೊಂಡ ನಂತರ ಹೊರಡಿಸಬೇಕೆಂದು ಲೈಸೆನ್ಸನ್ನು ಮಾಡತಕ್ಕದ್ದು.*

*ಪರಂತು, ಅಬಕಾರಿಯ ಉಪ–ಆಯುಕ್ತರು, ಅಬಕಾರಿ ಆಯುಕ್ತರ ಪೂರ್ವಾನುಮೋದನೆಯನ್ನು ಪಡೆದು ಮತ್ತು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, 100 ಮೀಟರುಗಳ ಅಂತರದೊಳಗೆ, ಯಾವುದೇ ಅಂಗಡಿಯ ಸ್ಥಳವನ್ನು ಅನುಮೋದಿಸಬಹುದು. ಆದರೆ, ನಗರ ಪಾಲಿಕೆ ಅಥವಾ ನಗರ ಸಭೆ ಪರಿಮಿತಿಯೊಳಗೆ (1)ನೇ ಉಪ–ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಸಂಸ್ಥೆಗಳು, ಆಸ್ಪತ್ರೆ, ಕಚೇರಿ ಅಥವಾ ಸ್ಥಳದಿಂದ 50 ಮೀಟರುಗಳಿಗಿಂತ ಕಡಿಮೆ ಅಂತರವಿರಬಾರದು.*

*[ಮತ್ತೂ ಪರಂತು, ಅಬಕಾರಿ ಉಪ–ಆಯುಕ್ತರು, ರಾಜ್ಯ ಹೆದ್ದಾರಿ ಅಥವಾ ರಾಷ್ಟ್ರೀಯ ಹೆದ್ದಾರಿಯ ಮಧ್ಯದಿಂದ 220 ಮೀಟರುಗಳ ದೂರದ ಪರಿಮಿತಿಯೊಳಗಿರುವ ಆವರಣಗಳಲ್ಲಿ, ಅಂಥ ಆವರಣಗಳು, ಪ್ರಧಾನವಾಗಿ ವಾಸಿಸುವ ಪ್ರದೇಶದಲ್ಲಿದ್ದರೆ, ಅಥವಾ ಪಟ್ಟಣದ, ಗ್ರಾಮದ ವಿಸ್ತೃತ ಪ್ರದೇಶವಾಗಿದ್ದರೆ ಅಥವಾ ಎರಡು ಸಾವಿರದ ಐದುನೂರಕ್ಕಿಂತ ಹೆಚ್ಚಿನ ಜನಸಂಖ್ಯೆಯುಳ್ಳ ಪ್ರದೇಶವಾಗಿದ್ದರೆ ಮತ್ತು ಅಂಥ ಆವರಣಗಳಲ್ಲಿ ಅಂಗಡಿಯನ್ನು ಸ್ಥಾಪಿಸಲು ಲೈಸೆನ್ಸನ್ನು ಮಂಜೂರು ಮಾಡಿದ್ದಲ್ಲಿ ಅಥವಾ 1ನೇ ಜುಲೈ 1992ರಿಂದ ಪ್ರಾರಂಭಗೊಂಡು ಕೊನೆಗೊಳ್ಳುವ [30ನೇ ಜೂನ್ 1994] ಅವಧಿಯಲ್ಲಿ ಅಸ್ತಿತ್ವದಲ್ಲಿರುವ ಆವರಣಗಳಲ್ಲಿ*

*ಯಾವುದೇ ಮದ್ಯದಂಗಡಿಯನ್ನು ಸ್ಥಾಪಿಸಲು ಲೈಸೆನ್ಸನ್ನು ಮಂಜೂರು ಮಾಡಬಹುದು.*

*[2–ಎ (1) ಮತ್ತು (2)ನೇ ಉಪ–ನಿಯಮಗಳಲ್ಲಿ ಒಳಗೊಂಡಿರುವುದು ಏನೇ ಇದ್ದರೂ, ಸಾರ್ವಜನಿಕರ ಭದ್ರತೆ, ಅನುಕೂಲ, ನೀತಿ ವಿಚಾರಗಳು, ಪ್ರಶಾಂತತೆ, ಲಭ್ಯತೆ ಅಥವಾ ಸುರಕ್ಷತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಯಾವುದೇ ಇತರ ಕಾರಣಕ್ಕಾಗಿ ಅದರ ಕಾರಣಗಳನ್ನು ದಾಖಲಿಸಿದ ನಂತರ ಮದ್ಯದಂಗಡಿ ಅಥವಾ ಆವರಣಗಳಿಗೆ ಲೈಸೆನ್ಸ್‌ಗೆ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಬಹುದು.]*

*(3) ಈ ನಿಯಮದ ಉದ್ದೇಶಕ್ಕಾಗಿ, ಈ ನಿಯಮದಲ್ಲಿ, ಈ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ದೂರವನ್ನು ಅಳತೆ ಮಾಡುವಾಗ ಕಾಂಪೌಂಡ್ ಗೋಡೆ ಇದ್ದರೆ, ಅಂಗಡಿಯನ್ನು ಪ್ರವೇಶ ದ್ವಾರದ ಮಧ್ಯಭಾಗವನ್ನು ಮತ್ತು ಸಂಸ್ಥೆ, ಆಸ್ಪತ್ರೆ ಅಥವಾ ಕಚೇರಿಯ ಹತ್ತಿರದ ಮಧ್ಯ ಭಾಗವನ್ನು, ಬಳಸಿಕೊಂಡು ಮತ್ತು ಕಾಂಪೌಂಡ್ ಗೋಡೆ ಇಲ್ಲದಿದ್ದರೆ, ಕಚೇರಿಯ, ಸಂಸ್ಥೆಯ ಹತ್ತಿರದ ಪ್ರವೇಶದ್ವಾರ ಮಧ್ಯ ಭಾಗವನ್ನು ಬಳಸಿಕೊಂಡು ಪಾದಚಾರಿಯು ಸಾಮಾನ್ಯವಾಗಿ ಹತ್ತಿರದ ಮಾರ್ಗದೊಂದಿಗೆ ದೂರವನ್ನು ಅಳತೆ ಮಾಡತಕ್ಕದ್ದು.*

*(4) ಉಪ–ಆಯುಕ್ತರು, ಆದೇಶದ ಮೂಲಕ, ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ,*

*(ಎ) ಈ ನಿಯಮಗಳ ಉಪಬಂಧಗಳ ಸಂಬಂಧ ಸಾರ್ವಜನಿಕರ (ಅಥವಾ ಅನುಸರಣೆ) ಅನುಕೂಲ, ನೀತಿ ವಿಚಾರಗಳು, ಪ್ರಶಾಂತತೆ*

*ಅಥವಾ ಸುರಕ್ಷತೆಯನ್ನು ಕಾಪಾಡುವುದನ್ನು ದೃಷ್ಟಿಯಲ್ಲಿಟ್ಟುಕೊಂಡು; ಅಥವಾ*

*(ಬಿ) ಲೈಸೆನ್ಸನ್ನು ನೀಡಿದ ನಂತರ ಈ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಪರಿಮಿತಿಯೊಳಗೆ ಯಾವುದೇ ಧಾರ್ಮಿಕ ಸಂಸ್ಥೆ ಅಥವಾ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸಿದಲ್ಲಿ [ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರಗಳ ಅಥವಾ ಆಸ್ಪತ್ರೆಯ ಯಾವುದೇ ಕಚೇರಿ ಪ್ರಾರಂಭವಾಗಿದ್ದಲ್ಲಿ];*

*ತಾನು ನಿರ್ದಿಷ್ಟಪಡಿಸಬಹುದಾದಂತೆ ಮೂರು ತಿಂಗಳುಗಳಿಗೆ ಮೀರದಂಥ ಅವಧಿಯೊಳಗೆ ಯಾವುದೇ ಇತರ ಸೂಕ್ತ ಸ್ಥಳಕ್ಕೆ ಯಾವುದೇ ಅಂಗಡಿಯ ಜಾಗವನ್ನು ಸ್ಥಳಾಂತರಿಸಲು ಅಂಥ ಲೈಸೆನ್ಸನ್ನು ನೀಡಬಹುದು.*

*[(5) ಅಬಕಾರಿ ಆಯುಕ್ತರು, ತಮ್ಮ ವಿವೇಚನೆಯಂತೆ, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯದ ಮಾರಾಟ) ನಿಯಮಗಳು, 1968ರ 3ನೇ ನಿಯಮದ (11)ನೇ ಖಂಡದಲ್ಲಿ ಉಲ್ಲೇಖಿಸಲಾದ ವಿತರಕ ಲೈಸೆನ್ಸುಗಳ ಸಂದರ್ಭದಲ್ಲಿ ಈ ನಿಯಮಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಬಹುದು]"*

11. ಆದುದರಿಂದ, ಅರ್ಜಿದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಕೆಐಎಡಿಬಿಯು ಹೋಟೆಲುಗಳಿಗೆ ಅಭಿವೃದ್ಧಿಪಡಿಸಿದ ಮತ್ತು ಹಂಚಿಕೆ ಮಾಡಿದ ಕೈಗಾರಿಕಾ ಪ್ರದೇಶ ಪರಿಮಿತಿಯೊಳಗಿರುವ ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳಿಗೆ ಲೈಸೆನ್ಸನ್ನು ಮಂಜೂರು ಮಾಡುವ / ನವೀಕರಿಸುವ ವಿಷಯದಲ್ಲಿ ಹಸ್ತಕ್ಷೇಪ

ಮಾಡುವ ಮತ್ತು ಆಕ್ಷೇಪಿಸುವ ಅಧಿಕಾರವ್ಯಾಪ್ತಿಯನ್ನು ಎದುರುದಾರ ಕೆಐಎಡಿಬಿಯು ಹೊಂದಿರುವುದಿಲ್ಲವೆಂದು ಇದು ನಿಸ್ಸಂದೇಹವಾಗಿ 'ಕೈಗಾರಿಕೆ; ಯಾಗಿದ್ದು, ರಾಜ್ಯದ ಕಡೆಯಿಂದ ಇದಕ್ಕೆ ಯಾವುದೇ ವಿವಾದವಿರುವುದಿಲ್ಲವೆಂದು ನಿವೇದಿಸಿದ್ದಾರೆ.

12. ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕೆಐಎಡಿಬಿಯ ಸದಸ್ಯರ ದಿನಾಂಕ:07.04.2015ರ ಅನುಬಂಧ–ಇ ಸಂಬಂಧದಲ್ಲಿ ನ್ಯಾಯಾಲಯದ ಗಮನವನ್ನು ಸೆಳೆದಿದ್ದಾರೆ. ಸದರಿ ಪತ್ರದ 2ನೇ ಕಂಡಿಕೆಯನ್ನು ಸಿದ್ಧ ಉಲ್ಲೇಖಕ್ಕಾಗಿ ಈ ಕೆಳಗೆ ಉದ್ಧರಿಸಲಾಗಿದೆ;

> *"ವಿಧಾನ ಪರಿಷತ್ತಿನಲ್ಲಿ ದಿನಾಂಕ 3.7.2014ರಂದು ಮಾನ್ಯ ವಿಧಾನ ಪರಿಷತ್ ಸದಸ್ಯ ಶ್ರೀ ರಾಮಚಂದ್ರಗೌಡರ (ಪದವೀಧರ ಕ್ಷೇತ್ರ) ಸಂ.128 (583)ರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸುವಾಗ,* ***ಮಾನ್ಯ ಮುಖ್ಯಮಂತ್ರಿಯವರು ನೀಡಿದ ಭರವಸೆಗಳ ಪ್ರಕಾರ*** *ಕ್ರಮವನ್ನು ಪ್ರಾರಂಭಿಸಲು ರೂಪಿಸಿದ ಸಮಿತಿಯ ಶಿಫಾರಸುಗಳ ಪ್ರಕಾರ,* ***ಈ ಮುಂದಿನ ಕ್ರಮವನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ:***
>
> *1. ಯಾವ ಉದ್ದೇಶಗಳಿಗೆ ಅವುಗಳನ್ನು ಹಂಚಿಕೆ ಮಾಡಲಾಗಿದೆಯೋ ಆ ಉದ್ದೇಶಗಳನ್ನು ಹೊರತುಪಡಿಸಿ ಕಾನೂನುಬಾಹಿರವಾಗಿ ನಡೆಸುತ್ತಿರುವ ಹೋಟೆಲುಗಳ ವಿವರಗಳನ್ನು ಒದಗಿಸಲು ವಿಫಲರಾದ ಮತ್ತು ಉಲ್ಲಂಘಿಸುವುದನ್ನು ತಡೆಯುವಲ್ಲಿ ಅಧಿಕಾರಿಗಳ ವಿವರಗಳನ್ನು ಸಿದ್ಧಪಡಿಸಲಾಗಿದೆ.* ***ನಿಯಮಗಳ ಪ್ರಕಾರ ಸದರಿ ಅಧಿಕಾರಿಗಳ ವಿರುದ್ಧ ಕ್ರಮವನ್ನು ಕೈಗೊಳ್ಳಲು ಮಂಡಳಿಯ ಆಡಳತಾತ್ಮಕ ಶಾಖೆಗೆ ನಿರ್ದೇಶನ ನೀಡುವುದು;***

2. **ಕೈಗಾರಿಕಾ ಪ್ರದೇಶಗಳಲ್ಲಿ ಕಾನೂನುಬಾಹಿರವಾಗಿ ಹೋಟೆಲುಗಳನ್ನು ಮತ್ತು ಬಾರುಗಳನ್ನು ನಡೆಸುತ್ತಿರುವ ಹಂಚಿಕೆಗಾರರ ಲೈಸೆನ್ಸನ್ನು ರದ್ದುಪಡಿಸಲು** ಜಿಲ್ಲಾ ಆಡಳಿತದ ಅಬಕಾರಿ ಇಲಾಖೆಗೆ ಪತ್ರಗಳನ್ನು ಬರೆಯುವುದು;

13. ನಾನು ಮಾನ್ಯ ವಕೀಲರುಗಳ ವಾದವನ್ನು ಆಲಿಸಿ, ದಾಖಲೆಗಳನ್ನು ಅವಗಾಹಿಸಿದ್ದೇನೆ.

14. ಎದುರುದಾರರಾದ ಕೆಐಎಡಿಬಿ ಹಾಗೂ ಅಬಕಾರಿ ಇಲಾಖೆಯ ಪರವಾದ ವಕೀಲರು, ಅಬಕಾರಿ ಅಧಿನಿಯಮ ಅಥವಾ ಕರ್ನಾಟಕ ಅಬಕಾರಿ (ಲೈಸೆನ್ಸುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ಇವುಗಳಲ್ಲಿ 5ನೇ ನಿಯಮವನ್ನು ಹೊರತುಪಡಿಸಿ ಯಾವುದೇ ನಿರ್ದಿಷ್ಟ ಶಾಸನಬದ್ಧ ಉಪಬಂಧಗಳನ್ನು ಎತ್ತಿತೋರಿಸಲು ಅಸಮರ್ಥವಾಗಿದ್ದು, ಇದರಡಿಯಲ್ಲಿ ಅಬಕಾರಿ ಅಧಿನಿಯಮದ ಮೇರೆಗೆ ಅಬಕಾರಿ ಲೈಸೆನ್ಸನ್ನು ನೀಡಿರುವ/ನವೀಕರಿಸಿರುವ ಪ್ರಕರಣಗಳನ್ನು ಪರಿಗಣಿಸಲು ಕೆಐಎಡಿಬಿಯಿಂದ ನೀಡಿದ 'ನಿರಾಕ್ಷೇಪಣಾ' ಅಥವಾ ತೀರುವಳಿಯನ್ನು ಅಗತ್ಯಪಡಿಸಲಾಗಿತ್ತು. ಮೇಲೆ ಉದ್ಧರಿಸಲಾದ ಕರ್ನಾಟಕ ಅಬಕಾರಿ ನಿಯಮಗಳು, 1967ರ 5ನೇ ನಿಯಮವು, ಕೆಐಎಡಿಬಿಯ ಅಂಥ ಯಾವುದೇ ಹಸ್ತಕ್ಷೇಪಕ್ಕೆ ಅನುಮತಿಸಿರುವುದಿಲ್ಲ. ಅರ್ಜಿದಾರನ ಹೋಟೆಲನ್ನು ನಿರ್ಮಿಸಿರುವ ಪ್ರಶ್ನಿತ ಕೈಗಾರಿಕಾ ನಿವೇಶನದ ಗುತ್ತಿಗೆ ಪತ್ರ/ಕ್ರಯಪತ್ರದ ಯಾವುದೇ ಒಂದರ ಷರತ್ತುಗಳನ್ನು ನಮ್ಮ ಮುಂದಿರುವ ಪ್ರಕರಣ ಉಲ್ಲಂಘಿಸಿರುವುದಿಲ್ಲ. ಅಂಥ ಕ್ರಯಪತ್ರ/ಗುತ್ತಿಗೆ ಪತ್ರದ ಅಂಥ ಯಾವುದೇ ಉಲ್ಲಂಘನೆ ಆಗಿದ್ದರೆ, ಎದುರುದಾರ–ಕೆಐಎಡಿಬಿ ಅದಕ್ಕೆ ರೂಪಿಸಿರುವ ಉಪಬಂಧಗಳು ಎಂದರೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (ಕರ್ನಾಟಕ ಅಧಿನಿಯಮ ಸಂಖ್ಯೆ.18/1966) ಅಥವಾ ಅದರಡಿಯಲ್ಲಿ ರೂಪಿಸಲಾದ ನಿಯಮಗಳ ಅಡಿಯಲ್ಲಿ ಕ್ರಮ ಜರುಗಿಸಬಹುದು. ಆದರೆ, ಕೆಐಎಡಿಬಿಯಿಂದ ಅಂಥ ಯಾವುದೇ ತೀರುವಳಿಯನ್ನು ಪಡೆದುಕೊಳ್ಳಲು ಅಬಕಾರಿ ಪ್ರಾಧಿಕಾರಕ್ಕಾಗಲಿ ಅಬಕಾರಿ ಲೈಸೆನ್ಸ್ ಅಥವಾ ಅದರ ನವೀಕರಣದ ಪರಿಗಣನೆಗಾಗಿ ಅಂಥ ಯಾವುದೇ ನಿರ್ಬಂಧವನ್ನು ಮಾಡಲು ಅಥವಾ ಕೆಐಎಡಿಬಿ ಅಧಿನಿಯಮ, 1966 ಅಥವಾ ಕೆಐಎಡಿಬಿ ಅಧಿನಿಯಮದ ಮೇರೆಗೆ ರೂಪಿಸಲಾದ ನಿಯಮಗಳ

ಯಾವುದೇ ಉಪಬಂಧಕ್ಕಾಗಲಿ ಶಾಸನಬದ್ಧ ಅಗತ್ಯತೆ ಇರುವುದಿಲ್ಲ. ಪ್ರಶ್ನಿತ ಪತ್ರದಲ್ಲಿ ಉಲ್ಲೇಖಿಸಲಾದ ವಿಧಾನ ಸಭೆಯಲ್ಲಿನ ಪ್ರಶ್ನೋತ್ತರವು, ಶಾಸನ ರೂಪಿಸಲು ಕಾರಣವಾಗುವುದಿಲ್ಲ.

15. ಸಂಬಂಧಪಟ್ಟ ನಿಯಮಗಳು ಅಥವಾ ಅಧಿನಿಯಮಿತಿಗಳಲ್ಲಿ ಯಾವುದೇ ಶಾಸನಾತ್ಮಕ ಮಂಜೂರಾತಿಯಿಲ್ಲದಿರುವಾಗ, ಅಬಕಾರಿ ಆಯುಕ್ತರಿಗೆ ಬರೆದ ಕೆಐಎಡಿಬಿಯ ದಿನಾಂಕ **31.01.2015**ರ ಪ್ರಶ್ನಿತ ಪತ್ರಕ್ಕೆ ಸಂಪೂರ್ಣವಾಗಿ ಯಾವುದೇ ಅಧಿಕಾರ ವ್ಯಾಪ್ತಿಯಿಲ್ಲದಿರುವುದು ಪ್ರಸ್ತುತ ಪ್ರಕರಣದಲ್ಲಿ ಅಬಕಾರಿ ಲೈಸೆನ್ಸ್‌ನ್ನು ನವೀಕರಿಸುವ ವಿಷಯವನ್ನು ಪರಿಗಣಿಸಲು ಅಬಕಾರಿ ಪ್ರಾಧಿಕಾರದ ವಿವೇಚನೆಯಂತೆ ಅನಗತ್ಯವಾಗಿ ಮಧ್ಯೆ ಪ್ರವೇಶಿಸಿರುವುದು ಕಂಡು ಬರುತ್ತದೆ.

16. ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು, ಕೆಐಎಡಿಬಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಬರೆದ ಅನುಬಂಧ–ಇ ನಲ್ಲಿರುವ ದಿನಾಂಕ **07.04.2015**ರ ಪತ್ರವನ್ನು ಹೊರಡಿಸಲು ಕೆಐಎಡಿಬಿಗೆ ಅಧಿಕಾರ ವ್ಯಾಪ್ತಿಯಿಲ್ಲದಿರುವುದನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಯಾವುದೇ ಅಧಿಕಾರ ವ್ಯಾಪ್ತಿಯಿಲ್ಲದಿದ್ದು, ಯಾವುದೇ ಶಾಸನಬದ್ಧ ಉಪಬಂಧಗಳಿಲ್ಲದಿರುವಾಗ, ಯಾವುದೇ ಅಂಥ ಪತ್ರವನ್ನು, ಅಂಥ ಆಕ್ಷೇಪಣೆಗಳನ್ನು ಎತ್ತಲು ಕೆಐಎಡಿಬಿಗೆ ರಾಜ್ಯ ಸರ್ಕಾರವು ಬರೆಯಲಾಗುವುದಿಲ್ಲ. ಆದುದರಿಂದ ಕೆಐಎಡಿಬಿಯು ತೋರಿಸಿದ ಆಪಾದಿತ ಕಾನೂನುಬಾಹಿರತೆಗೆ ಯಾವುದೇ ಅಧಿಕಾರವ್ಯಾಪ್ತಿಯಿರುವುದಿಲ್ಲ. ಆದುದರಿಂದ, ಈ ನ್ಯಾಯಾಲಯದ ಮುಂದಿರುವ ಅರ್ಜಿದಾರರ ವಾದಕ್ಕೆ ಬಾಧಕವಾಗುವಷ್ಟರಮಟ್ಟಿಗೆ ಇರುವ ರಾಜ್ಯ ಸರ್ಕಾರ ಮತ್ತು ಕೆಐಎಡಿಬಿಯ ದಿನಾಂಕ: **07.04.2015** ಮತ್ತು **31.01.2015**ರ ಎರಡೂ ಪತ್ರಗಳನ್ನು ರದ್ದುಗೊಳಿಸಲಾಗಿದೆ ಮತ್ತು ಅವುಗಳನ್ನು ತದನುಸಾರವಾಗಿ ಈ ಮೂಲಕ ರದ್ದುಗೊಳಿಸಲಾಗಿದೆ.

17. ಕೆಐಎಡಿಬಿ ಅಧಿನಿಯಮ, 1966ರ 2(1)ನೇ ಪ್ರಕರಣದ ಮೇರೆಗೆ "ಸೌಕರ್ಯ" ಎಂಬುದರ ಅರ್ಥವ್ಯಾಪ್ತಿಯೊಳಗೆ 'ಹೋಟೆಲ್' ಎಂಬುದನ್ನು ಸೇರಿಸಿದರೆ ಎದುರುದಾರ – ಕೆಐಎಡಿಬಿಗೆ ಸ್ವಲ್ಪ ಸಹಾಯವಾಗುತ್ತದೆ ಮತ್ತು 'ಸೌಕರ್ಯ'

ಎಂಬುದರ ಪರಿಭಾಷೆಯೊಳಗೆ 'ಹೋಟೆಲು'ಗಳನ್ನು ಸೇರಿಸುವುದರಿಂದ, ಕೆಐಎಡಿಬಿ ಅಧಿನಿಯಮದ ಉಪಬಂಧಗಳು ಅವರಿಗೆ ಉತ್ತಮ ವಿಸ್ತರಣೆಯಾಗುತ್ತವೆ. ಕರ್ನಾಟಕ ರಾಜ್ಯ ಅಬಕಾರಿ ಅಧಿನಿಯಮ, 1965ರ ಉಪಬಂಧಗಳ ಅಡಿಯಲ್ಲಿ ಎದುರುದಾರ ಅಬಕಾರಿ ಅಧಿಕಾರಿಗಳಿಗೆ ಪ್ರದತ್ತವಾದ ಅಧಿಕಾರಗಳೊಟ್ಟಿಗೆ ಹಸ್ತಕ್ಷೇಪವನ್ನು ಮಾಡಲು ಆಗುವುದಿಲ್ಲ. ಈ ಎರಡೂ ಅಧಿನಿಯಮಗಳನ್ನು ಸೌಹಾರ್ದಯುತವಾಗಿ ಓದಿದ ಮೇಲೆಯೂ ಕೂಡ ಅಂಥ ಹಸ್ತಕ್ಷೇಪವನ್ನು ಈ ಸಂಬಂಧದಲ್ಲಿನ ಯಾವುದೇ ಕಾನೂನಾತ್ಮಕ ಉಪಬಂಧದ ಮೂಲಕ ಸಮರ್ಥಿಸುವುದಿಲ್ಲ. ಈ ಸಂಬಂಧದಲ್ಲಿ ಯಾವುದೇ ಸ್ಪಷ್ಟ ಉಪಬಂಧಗಳಿಲ್ಲದಿರುವುದರಿಂದ ರಾಜ್ಯ ಸರ್ಕಾರ ಮತ್ತು ಕೆಐಎಡಿಬಿಯ ದಿನಾಂಕ: 07.04.2015 ಮತ್ತು 31.01.2015ರ ಪತ್ರಗಳನ್ನು ರದ್ದುಗೊಳಿಸಲು ಕಾರಣವಾಗುತ್ತವೆ ಮತ್ತು ಈ ನ್ಯಾಯಾಲಯವು ಮೇಲೆ ಅವುಗಳನ್ನು ರದ್ದುಗೊಳಿಸಿರುವುದರಿಂದ ದಿನಾಂಕ: 30.06.2016ರ ಪ್ರಶ್ನಿತ ಹಿಂಬರಹ ಅನುಬಂಧ –ಎಫ್‌ಅನ್ನು ಉಳಿಸಿಕೊಳ್ಳಲು ಯಾವುದೇ ಕಾನೂನು ಆಧಾರಗಳು ಉಳಿದಿರುವುದಿಲ್ಲ. ಆದುದರಿಂದ ಅದನ್ನು ಸಹ ರದ್ದುಗೊಳಿಸಿದ್ದು, ತದನುಸಾರವಾಗಿ ಇದನ್ನು ರದ್ದುಗೊಳಿಸಲಾಗಿದೆ.

18. ಆದುದರಿಂದ ಈ ರಿಟ್ ಅರ್ಜಿಗಳನ್ನು ಪುರಸ್ಕರಿಸಲು ಅರ್ಹವಾಗಿವೆ. ರಾಜ್ಯ ಅಬಕಾರಿ ಅಧಿನಿಯಮ, 1967ರ ಮೂಲಕ ರೂಪಿಸಲಾದ ಅಬಕಾರಿ ಪ್ರಾಧಿಕಾರಗಳ ಅಧಿಕಾರವನ್ನು ಚಲಾಯಿಸಿ, ಪ್ರತಿಯಾಗಿ ವಿಷಯದಲ್ಲಿನ ಅವರ ಅನಗತ್ಯ ಮತ್ತು ಕಾನೂನುಬಾಹಿರವಾಗಿ ಹಸ್ತಕ್ಷೇಪ ಮಾಡಿದ್ದು, ಇಲ್ಲಿಯವರೆಗೆ ಅಬಕಾರಿ ಲೈಸೆನ್ಸುಗಳನ್ನು ಕೋರುವ ಅವರ ಹಕ್ಕುಗಳನ್ನು ಕಿತ್ತುಕೊಂಡಿರುವ ಕಾರಣದಿಂದ ಈ ನ್ಯಾಯಾಲಯದ ಮುಂದಿರುವ ಪ್ರತಿಯೊಬ್ಬರಿಗೆ ಎದುರುದಾರ ಕೆಐಎಡಿಬಿಯು 5,000/– ರೂ.ಗಳ ವೆಚ್ಚವನ್ನು ಸಂದಾಯ ಮಾಡುವುದರ ಜೊತೆಗೆ ಇದನ್ನು ಪುರಸ್ಕರಿಸಲಾಗಿದೆ.

19. ವಿವಿಧ ಪ್ರಕರಣಗಳಲ್ಲಿ ಅವರ ಅಬಕಾರಿ ಲೈಸೆನ್ಸುಗಳ ನವೀಕರಣಕ್ಕಾಗಿ ಮನವಿಯನ್ನು ಮಾಡಿರುವುದನ್ನು ಮತ್ತು ಎದುರುದಾರ ಕೆಐಎಡಿಬಿಯು ನಿರ್ವಹಣಾ

ವೆಚ್ಚಗಳಿಗೆ ಒತ್ತಾಯ ಮಾಡಿರುವುದನ್ನು ಪರಿಗಣಿಸುವುದನ್ನು ನಿರಾಕರಿಸಿ, ಪ್ರಶ್ನಿಸಲಾಗಿರುವ ಸದೃಶ ಅನುಬಂಧಗಳನ್ನು ರದ್ದುಗೊಳಿಸಲಾಗಿದ್ದು, ಅವುಗಳನ್ನೂ ಸಹ ರದ್ದುಗೊಳಿಸಲಾಗಿದೆ.

ಎದುರುದಾರ ಅಬಕಾರಿ ಪ್ರಾಧಿಕಾರಿಗಳು, ತ್ವರಿತವಾಗಿ ಈಗ ನವೀಕರಣ ಅರ್ಜಿಯನ್ನು ನಿರ್ಧರಿಸತಕ್ಕದ್ದು.